ಆಗಾಗ ಪದ್ಮನಾಭಸ್ವಾಮಿಯ ದೇವಾಲಯಕ್ಕೆ ಹೋಗಿ ಏಳಂತಸ್ತಿನ ಗೋಪುರಗಳನ್ನು, ಅಲ್ಲಿಯ ನೂರಾರು ಸ್ತಂಭಗಳನ್ನು, ಹಣತೆಯ ಬೆಳಕಿನಲ್ಲಿ ವಿಜೃಂಭಿಸುವ ಅದ್ಭುತ ಕೆತ್ತನೆಯ ವಿಗ್ರಹಗಳನ್ನು ನೋಡುವುದು ನನ್ನ ಮುಖ್ಯ ಹವ್ಯಾಸವಾಯಿತು. ಜೊತೆಗೆ ಮಹಾರಾಜರ ಅಪೇಕ್ಷೆಯಂತೆ ಅಲ್ಲಿನ ವಿಪುಲ ಗ್ರಂಥಭಂಡಾರದಲ್ಲಿ ಚಿತ್ರಕಲೆಯನ್ನು ಕುರಿತಾದ ಅನೇಕ ಗ್ರಂಥಗಳ ಅಧ್ಯಯನ ಮಾಡುತ್ತಿದ್ದೆ.

ಮಹಾರಾಜರ ಅಪ್ಪಣೆಯ ಮೇರೆಗೆ ರಾಮಸ್ವಾಮಿ ನಾಯಕರ್ ನನಗೆ ಪಾಠವನ್ನೇನೋ ಆರಂಭಿಸಿದರು. ಆದರೆ ಅವರು ಬಣ್ಣಗಳನ್ನು ಕಲಸುವಾಗ ನನ್ನನ್ನು ಕೋಣೆಯೊಳಗೆ ಬಿಡುತ್ತಿರಲಿಲ್ಲ. ಇದು ನನಗೆ ಅತ್ಯಂದ ಖೇದದ ವಿಚಾರವಾಗಿತ್ತು. ನನ್ನದೇ ಓರಗೆಯ ಗೆಳೆಯ ರಾಮಯ್ಯನೊಂದಿಗೆ ನನ್ನ ದುಃಖ ತೋಡಿಕೊಂಡೆ.

ಒಂದು ದಿನ ಬೇಕೆಂದೇ ನಾವಿಬ್ಬರೂ ನಾಯಕರ್ ಬಣ್ಣಗಳನ್ನು ಕಲಸುವಾಗ ಒಳಗೆ ಹೋದೆವು. ಅವರಿಗೆ ಕೋಪ ಬಂದು ನಮ್ಮನ್ನು ಆಚೆ ಕಳುಹಿಸಿದರು. ನನಗೆ ತುಂಬಾ ರೇಗಿತು, ತಕ್ಷಣವೇ ಮಹಾರಾಣಿ ಲಕ್ಷ್ಮೀಬಾಯಿಯವರನ್ನು ಕಾಣಲು ಅಪ್ಪಣೆ ಪಡೆದೆ. ಮಹಾರಾಣಿಯವರು ಆಯಿಲ್ಯ ಮಹಾರಾಜರ ಅಕ್ಕನ ಮಗಳು. ಮಾತೃಪ್ರಧಾನ ವಂಶವಾದ್ದರಿಂದ ಆಕೆಯೇ ಅರಮನೆಯ ರಾಜಮಾತೆ.

ಉದ್ದನೆಯ ಕಪ್ಪುಕೂದಲನ್ನು ಹಣಿಗೆಯಿಂದ ಬಾಚುತ್ತಿದ್ದ ರಾಜಮಾತೆ ನನ್ನನ್ನು ಹತ್ತಿರ ಕರೆದು ಏನೆಂದು ಕೇಳಿದರು. 'ನನಗೆ ಹತ್ತು ರೂಪಾಯಿಗಳನ್ನು ಕೊಡುವಿರಾ, ಸ್ವಲ್ಪ ಬಣ್ಣಗಳನ್ನು ಕೊಳ್ಳಬೇಕು, ಮಾವ ಹಣ ಕಳುಹಿಸಿದ ಕೂಡಲೇ ಹಿಂತಿರುಗಿಸುವೆ' ಎಂದೆ. ರಾಜಮಾತೆ ಹಣವನ್ನು ಕೊಡುತ್ತಾ 'ಹಿಂತಿರುಗಿಸುವುದೇನೂ ಬೇಡ, ನಿನಗೆ ಬೇಕೆಂದಾಗ ಕೇಳಿ ಹಣ ಪಡೆದುಕೋ, ನಾನು ನಿನ್ನ ತಾಯಿಯಂತೆ' ಎಂದು ಅಕ್ಕರೆಯಿಂದ ನನ್ನ ತಲೆಸವರಿದರು. ನಾನು ಸಂತೋಷದಿಂದ ಅವರ ಪಾದಗಳಿಗೆ ನಮಿಸಿ ಹೊರಬಂದೆ. ಅಂಗಡಿಯಲ್ಲಿ ನನಗೆ ಬೇಕಾದ ಬಣ್ಣಗಳನ್ನೆಲ್ಲಾ ಕೊಂಡು ತಂದು, ನನ್ನ ಕೋಣೆಯಲ್ಲಿ ಕುಳಿತು ಮಿಶ್ರ ಮಾಡಿದೆ. ಇಲ್ಲಿ ನನ್ನ ಸೋದರಮಾವ ಹೇಳಿಕೊಟ್ಟ ಕಲೆ ನನಗೆ ಸಹಾಯ ಮಾಡಿತು.

ಮರುದಿನ ನಾಯಕರ್ ಪಾಠಕ್ಕೆ ಕರೆದಾಗ ನಾನು ಮಿಶ್ರ ಮಾಡಿದ ಬಣ್ಣಗಳನ್ನು ತೆಗೆದುಕೊಂಡೇ ಹೋದೆ. ಅವರಿಗೆ ಅದನ್ನು ಕಂಡು ಸಿಟ್ಟು ಉಕ್ಕೇರಿತು. 'ಎಂತಹ ಉದ್ಧಟತನ! ನಾನು ಹೇಳಿಕೊಡದೆಯೇ ನಿನಗೆ ಬಣ್ಣಗಳನ್ನು ಮಾಡಲು ಬಂದುಬಿಟ್ಟಿತೋ?' ಎನ್ನುತ್ತಾ ಕೈಯಲ್ಲಿದ್ದ ದಂತದ ಬಣ್ಣದ ತಟ್ಟೆಯನ್ನು ರೊಯ್ಯಗೆ ಎಸೆದರು. ನನಗೂ ರೇಗಿತು. 'ನಾನು ಯಾರೆಂದು ತಿಳಿದಿರಿ? ಪ್ರಸಿದ್ಧ ಕಲಾಕಾರ ರಾಜರಾಜವರ್ಮ ನನ್ನ ಸೋದರಮಾವ. ಅವರೇ ನನಗೆ ಬಣ್ಣಗಳನ್ನು ಬೆರೆಸುವುದನ್ನು ಹೇಳಿಕೊಟ್ಟಿದ್ದಾರೆ. ಇಷ್ಟಕ್ಕೂ ಇಷ್ಟು ದಿನ ನೀವು ನನಗೆ ಎಲೆ, ಹೂಗಳ ಚಿತ್ರಣ ಬಿಟ್ಟು ಬೇರೇನನ್ನೂ ಕಲಿಸಿಲ್ಲ. ನಿಮ್ಮ ಪಾಠವಿಲ್ಲದೆಯೇ ನಾನು ಕಲಿಯಬಲ್ಲೆ' ಎನ್ನುತ್ತಾ ಹೊರನಡೆಯಲು ಸನ್ನದ್ಧನಾದೆ. ನನ್ನ ವಾಸ್ತವತೆ ತಿಳಿದ ನಾಯಕರ್ ಕ್ಷಮಾಪಣೆ ಯಾಚಿಸುತ್ತಾ 'ನಾನು ಅರಮನೆಯ ಊಳಿಗ. ರಾಜರಿಂದ ತಮಗೆ ಪಾಠ ಹೇಳಲು ನಿಯುಕ್ತನಾದವನು. ತಮಗೆ ಪಾಠ ಹೇಳದಿದ್ದರೆ ರಾಜರ ಆಗ್ರಹಕ್ಕೆ ಆಳಾಗುವೆ' ಎಂದು ಬೇಡಿದರು. 'ನಿಮ್ಮ ಅರಮನೆಯ ಸಂಬಳ ನಮಗೆ ಸಿಗುವಂತೆ ಮಾಡುತ್ತೇನೆ, ಏಕೆಂದರೆ ನಿಮಗೆ ಪಾಠ ಹೇಳುವುದಕ್ಕಿಂತ ಹಣದ ಮೇಲಿನ ವ್ಯಾಮೋಹವೇ ಹೆಚ್ಚು' ಎನ್ನುತ್ತಾ ಹೊರನಡೆದೆ.

## ಮಹಾರಾಜ ಆಯಿಲ್ಯ ತಿರುನಾಳ್

ರವಿವರ್ಮನಿಗೂ, ರಾಮಸ್ವಾಮಿ ನಾಯಕರಿಗೂ ಆದ ವಾಗ್ಯುದ್ಧ ನನ್ನ ಗಮನಕ್ಕೆ ಬಂದಿತು. ನಾನು ರವಿವರ್ಮನಿಗೆ ಕರೆ ಕಳುಹಿಸಿ ಹೇಳಿದೆ. 'ಇದೋ ಇಲ್ಲಿ ನಿನಗೆ ಬೇಕಾದಷ್ಟು ಬಣ್ಣಗಳನ್ನು ತೆಗೆದುಕೋ, ಮದರಾಸಿನಿಂದ ತೈಲವರ್ಣಗಳನ್ನು ತರಿಸಿಕೊಡುತ್ತೇನೆ. ಪಾಶ್ಚಾತ್ಯ ಕಲಾವಿದರಾದ ಮಿ.ಬ್ರೂಕ್ಸ್‌ರನ್ನು ನಿನಗೆ ಉಪಾಧ್ಯಾಯರನ್ನಾಗಿ ನೇಮಿಸುತ್ತೇನೆ.'

ಮರುದಿನ ಬಂದ ಪರದೇಶದ ಬ್ರೂಕ್ಸ್ ಮಹಾಶಯರು ರವಿವರ್ಮನಿಗೆ ಪಾಠ ಹೇಳಲು ಒಪ್ಪಲಿಲ್ಲ. ಅವರು ರಚಿಸುವುದನ್ನು ನೋಡಲು ಅವನಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಆಜ್ಞಾಪಿಸಲು, ಒಲ್ಲದ ಮನದಿಂದಲೇ ಅನುಮತಿಯಿತ್ತರು. ಹೀಗೆ ರವಿವರ್ಮನ ಅನೇಕ ದಿನ ಬ್ರೂಕ್ಸ್ ರಚಿಸಿದ ಚಿತ್ರಗಳನ್ನು ವೀಕ್ಷಿಸುತ್ತಾ ಅವರ ಕೊಠಡಿಯಲ್ಲಿರುತ್ತಿದ್ದ. ಆಗ ಅವನಿಗೆ 15 16ರ ಪ್ರಾಯ.

ಒಮ್ಮೆ ನಾನು ರವಿವರ್ಮನನ್ನು ಕರೆಸಿ ಮಿ.ಬ್ರೂಕ್ಸ್ ಏನು ರಚಿಸುತ್ತಿದ್ದಾರೆಂದು ಕೇಳಿದಾಗ ಅವನು ತಲೆತಗ್ಗಿಸಿ 'ನನಗೆ ತಿಳಿಯದು' ಎಂದ. ನಾನು ಅಚ್ಚರಿಯಿಂದ 'ನೀನು ಕೋಣೆಯಲ್ಲಿ ಏನು ಮಾಡುತ್ತಿದ್ದೆ?' ಎಂದೆ. ರವಿವರ್ಮ 'ಅವರು ಹೆಬ್ಬೆರಳಿಗೆ ಸಿಕ್ಕಿಸಿಕೊಂಡ ಬಣ್ಣದ ತಟ್ಟೆಯನ್ನು, ಅವರು ಬಣ್ಣಗಳನ್ನು ಮಿಶ್ರ ಮಾಡುವುದನ್ನು' ಎಂದ.

ಈ ವಿಚಾರವನ್ನು ಬ್ರೂಕ್ಸ್‌ಗೆ ತಿಳಿಸಿದಾಗ ಅವನು ಕೋಪದಿಂದ ಸಿಡಿದೆದ್ದು 'ಹಾಗಿದ್ದರೆ ನಾನು ಇವನನ್ನು ನನ್ನ ಕೋಣೆಯೊಳಗೆ ಅನುಮತಿಸುವುದಿಲ್ಲ' ಎಂದುಬಿಟ್ಟ. ಇದನ್ನು ನಾನು ಮೊದಲೇ ನಿರೀಕ್ಷಿಸಿದ್ದೆ. ಏನೂ ಮಾತನಾಡದೆ ಹೊರಬಂದೆ.

ಮರುದಿನ ನಾನು ಅರಮನೆಯ ಆಳುಗಳೊಂದಿಗೆ ಅನೇಕ ರೀತಿಯ ಬಣ್ಣಗಳು, ಕುಂಚಗಳಿರುವ ತಟ್ಟೆಗಳನ್ನು ಹೊರಿಸಿಕೊಂಡು ರವಿವರ್ಮನ ಬಿಡಾರಕ್ಕೆ ಬಂದೆ. ಅವುಗಳನ್ನೆಲ್ಲಾ ಅಲ್ಲಿಡಿಸಿ 'ಇನ್ನು ಮುಂದೆ ನಿನಗೆ ಯಾರೂ ಕಲಿಸುವ ಅಗತ್ಯವಿಲ್ಲ. ಗ್ರಂಥಾಲಯದ ಸಹಾಯ ಪಡೆದುಕೋ, ನಿನಗೇನು ಬೇಕೋ ಅದನ್ನು ಚಿತ್ರಿಸು' ಎಂದೆ. ಅವನ ಆನಂದ ವರ್ಣನಾತೀತ! ತಕ್ಷಣ ನನ್ನ ಕಾಲಿಗೆರಗಿದ. ಅವನನ್ನೆಬ್ಬಿಸಿ ಆಲಂಗಿಸಿಕೊಂಡು ಆಶೀರ್ವದಿಸಿದೆ.

ಎಂಟು ದಿನಗಳ ನಂತರ ಅವನ ಕೋಣೆಗೆ ನಾನು ಕಾಲಿಟ್ಟಾಗ ನನಗೊಂದು ಆಶ್ಚರ್ಯ ಕಾದಿತ್ತು. ಮರದ ಚೌಕಟ್ಟ (wooden frame)ನ ಮೇಲಿದ್ದ ಕ್ಯಾನ್ವಾಸ್(canvas)ನ ಪರದೆಯನ್ನು ಸರಿಸಿದ ರವಿವರ್ಮ. ಅದರಲ್ಲಿ ರಾಣಿ ಲಕ್ಷ್ಮೀಬಾಯಿಯ ಭಾವಚಿತ್ರ(portrait) ಬಿಡಿಸಲಾಗಿತ್ತು. ರಾಜಮಾತೆ ಸಜೀವವಾಗಿ ನಿಂತಿರುವಂತಿತ್ತು. ಚಿತ್ರ, ನೀಲಿ ಪರದೆಯ ಮುಂದೆ, ಹೂಕುಂಡದ ಪಕ್ಕ ಆಕೆ ನಿಂತ ಭಂಗಿ ತದ್ರೂಪವಾಗಿತ್ತು. ನಾನು ಅವಾಕ್ಕಾದೆ.

'ಇದನ್ನು ನೀನೇ ಚಿತ್ರಿಸಿದೆಯಾ? ಎಷ್ಟು ದಿನ ತೆಗೆದುಕೊಂಡೆ' ಎಂದು ಕೇಳಿದೆ.

'ಎಂಟು ದಿನಗಳು ಪ್ರಭು' ಎಂದ. ಮಹಾರಾಣಿಗೆ ಕರೆ ಕಳುಹಿಸಿದೆ.

'ಬ್ರೂಕ್ಸ್‌ನ ಎದುರಿಗೆ ನಿಲ್ಲಲು ಇಷ್ಟಪಡದ ನೀನು ರವಿವರ್ಮನಿಗೆ ಹೇಗೆ ರೂಪದರ್ಶಿಯಾದೆ?' ಎಂದು ಕೇಳಿದೆ ಅಚ್ಚರಿಯಿಂದ.

'ಅವನನ್ನು ಉಪಾಹಾರಕ್ಕೆ ಕರೆಯಲೆಂದು ಒಮ್ಮೆ ಇಲ್ಲಿಗೆ ಬಂದೆ. ನನ್ನಲ್ಲಿ ಅಕ್ಕರೆ ತೋರಿದ ನಿಮ್ಮನ್ನೇ ಮೊದಲ ಚಿತ್ರವಾಗಿ ರಚಿಸಬೇಕೆಂದು ಬೇಡಿಕೊಂಡ. ಸಂತಸದಿಂದ ಒಪ್ಪಿಕೊಂಡೆ.'

'ಬ್ರೂಕ್ಸ್ ರಚಿಸಿರುವ ಅರಮನೆಯ ಹೆಂಗಸರ ಚಿತ್ರಕ್ಕಿಂತ ಇದು ಯಾವ ರೀತಿಯಲ್ಲೂ ಕಡಿಮೆಯಿಲ್ಲ ಅಲ್ಲವೆ? ಈಗಲಾದರೂ ಅರಿವಾಯಿತೇ ಪ್ರತಿಭೆ, ದೇಹದ ಬಣ್ಣಕ್ಕಿಂತ ಹೆಚ್ಚಿನದು ಎಂದು? ರವಿವರ್ಮ 1848ರ ಏಪ್ರಿಲ್ 29 ರಂದು ಹುಟ್ಟಿದವ. ಆದ್ದರಿಂದ ನಿನ್ನ ತಂಗಿ ಪುರತಾರ್ಥಿಯನ್ನು ಇವನಿಗೆ ಮದುವೆ ಮಾಡಲು ಈಗಲಾದರೂ ಒಪ್ಪುವೆಯಾ?'

ಮಹಾರಾಣಿ ಸಂತೋಷದಿಂದ ಒಪ್ಪಿಕೊಂಡಳು. ತಕ್ಷಣವೇ ರಾಜರಾಜವರ್ಮರಿಗೂ, ಮನೆತನದ ಮಿಕ್ಕವರಿಗೂ ಆಹ್ವಾನದ ಓಲೆ ಕಳುಹಿಸಿದೆ. ಒಂದು ಶುಭಮುಹೂರ್ತದಲ್ಲಿ ರವಿವರ್ಮನಿಗೆ ಪುರತಾರ್ಥಿಯನ್ನಿತ್ತು ವಿವಾಹದ ಮಂಗಳಕಾರ್ಯವನ್ನು ನೆರವೇರಿಸಿದೆವು.

## ಪುರತಾರ್ಥಿ

ನನ್ನ ವಂಶದ ಪದ್ಧತಿಯಂತೆ, ಮದುವೆಯ ನಂತರ ನನ್ನ ಪತಿ ರವಿವರ್ಮನನ್ನೂರಾದ ಮಾವೇಲಿಕ್ಕರಾಗೆ ಬಂದು ನೆಲೆಸಬೇಕಿತ್ತು. ನಾವು ಕೇರಳೀಯರು ಮಾತೃಪ್ರಧಾನ ಸಮಾಜವುಳ್ಳವರು. ಎಂತಲೇ ಮದುವೆಯ ಶಾಸ್ತ್ರ ಮುಗಿದು ನಾನು ಕಿಳಿಮಾನೂರಿಗೆ ಹೋದೆನಾದರೂ, ಎರಡನೇ ದಿನವೇ ರವಿವರ್ಮ ನನ್ನೂರಿಗೆ ಬರಲು ಸಿದ್ಧನಾಗಬೇಕಾಯ್ತು. ಆದರದೇಕೋ ಅವನ ಮುಖದಲ್ಲಿ ಲವಲವಿಕೆಯೇ ಇರಲಿಲ್ಲ. ನಾನು ಮೇನೆಯಲ್ಲಿ ಕುಳಿತಿದ್ದೆ. ರವಿವರ್ಮ ನನ್ನ ಪಕ್ಕದಲ್ಲಿ ಕುದುರೆಯ ಮೇಲೆ ಬರುತ್ತಿದ್ದ. ಪರದೆ ಸರಿಸಿ ನಡುನಡುವೆ ನೋಡುತ್ತಿದ್ದಾಗ ಅವನು ಅನ್ಯಮನಸ್ಕನಾಗಿ ಬರುತ್ತಿದ್ದುದು ಕಂಡಿತು. ಮದುವೆಯ ದಿನವೇ ಅವನು ತನ್ನ ಪ್ರತಿಭಟನೆ ತಿಳಿಸಿದ್ದ. ಮೊದಲ ರಾತ್ರಿಯ ಸುಖವನ್ನು ಅನುಭವಿಸಿದಾಗಲೂ, ಅವನಿಗೆ ಸಮಸ್ಯೆಯೆನಿಸಿದ್ದು ತಾನು ಪರಾವಲಂಬಿಯಂತೆ ನನ್ನ ಊರಿನಲ್ಲಿ